ಒಂದೆರಡು ಫೋಟೋಗಳಿದ್ದವು. ರಾಜನ ಫೋಟೋ ಎಲ್ಲಕ್ಕಿಂತ ದೊಡ್ಡದಾಗಿತ್ತು. ಇನ್ನೊಂದುಕಡೆ ಹತ್ತಾರು ಬಂದೂಕುಗಳನ್ನು ಒಂದೆಡೆ ಸಾಲಾಗಿ ಜೋಡಿಸಿಟ್ಟಿದ್ದರು. ಪಕ್ಕದಲ್ಲೇ ಒಂದು ವಾಟರ್ ಕೂಲರ್.

ಮುಂದೇನು ಮಾಡಬೇಕೆಂದು ತೋಚಲಿಲ್ಲ ಚಂದ್ರಕಾಂತನಿಗೆ. ಹೊಟ್ಟೆಯೆಲ್ಲ ತಳಮಳಿಸಿದಂತಾಯಿತು. ತನ್ನನ್ನು ಇಲ್ಲಿಗೆ ಕರೆತಂದಿರಬಹುದಾದ ಹಲವು ಕಾರಣಗಳನ್ನು ಯೋಚಿಸತೊಡಗಿದ. ಖಲೀಲನ ಕೈವಾಡವಿರಬಹುದೇ ಎಂಬ ಗುಮಾನಿಯಾಯಿತು. ಆತನೊಡನೆ ಕಸಬಾದ ಸೆನ್ಸಿಟಿವ್ ವಿಷಯಗಳನ್ನು ಮಾತನಾಡುತ್ತಿದ್ದುದರ ಪರಿಣಾಮವೇ ಇರಬೇಕು ಇದು ಎಂದು ಬಲವಾಗಿ ಅನ್ನಿಸತೊಡಗಿತು.

'ನಾನೇನನ್ನೂ ಮಾತನಾಡಿಯೇ ಇಲ್ಲವಲ್ಲ, ಕೇವಲ ಖಲೀಲ ಹೇಳುತ್ತಿದ್ದುದನ್ನು ಕೇಳಿಸಿಕೊಳ್ಳುತ್ತಿದ್ದೆ ಅಷ್ಟೇ. ಅದೂ ತಪ್ಪೇ?... ಹಾಗಾದರೆ ಈ ಖಲೀಲ ಯಾರಿರಬಹುದು? ಸರ್ಕಾರದ ಕಡೆಯ ಗೂಢಾಚಾರನೇ? ಅವನ ಸೂಚನೆಯ ಮೇರೆಗೇ ಪೊಲೀಸರು ನನ್ನನ್ನು ಹಿಡಿದಿದ್ದಾರೆಯೇ? ಅಥವಾ ಆತ ಸರಕಾರದ ವಿರುದ್ಧ ಇರುವವನೇ? ಅಂದಾದರೆ ಅವನನ್ನು ಬಿಟ್ಟು ನನ್ನನ್ನೇಕೆ ಹಿಡಿದರು ಇವರು?' ಖಲೀಲ ಕ್ಷಣಾರ್ಧದಲ್ಲಿ ಮಾಯವಾದದ್ದು ನೆನಪಿಗೆ ಬಂತು. ಆತ ಯಾರೇ ಆಗಿರಲಿ, ನನ್ನನ್ನು ಪೊಲೀಸರು ಹಿಡಿದದ್ದನ್ನು ನೋಡಿಯೇ ಆತ ಅಲ್ಲಿಂದ ಕಾಲ್ಕಿತ್ತಿದ್ದಾನೆ ಎಂಬುದು ಖಚಿತವಾಯಿತು.

'ನನ್ನನ್ನೇಕೆ ತಂದಿದ್ದಾರಿಲ್ಲಿ? ಏನಾದರೂ ವಿಚಾರಣೆಗೇ?... ಅಥವಾ ನನ್ನಮೇಲೆಯೇ ರಾಜದ್ರೋಹದ ಆಪಾದನೆ ಹೊರಿಸಿ ಜೈಲಿಗೇನಾದರೂ ಹಾಕಿಬಿಟ್ಟರೇ?...' ಚಂದ್ರಕಾಂತನಿಗೆ ಚೇತನಾಳ ನೆನಪಾಯಿತು. ಗಂಟಲು ಒಣಗಿ ತಲೆ ಸುತ್ತು ಬರುವಂತೆನಿಸಿತು. ಧೈರ್ಯ ಮಾಡಿ ನಿಧಾನ ಎದ್ದು ಹೋಗಿ ಟೇಬಲ್ಲಿನ ಹಿಂದಿದ್ದ ಪೊಲೀಸನಲ್ಲಿ ನೀರು ಕುಡಿಯಬಹುದೇ ಎಂದು ಕೇಳಿದ. ಮುಖದಲ್ಲಿ ಯಾವುದೇ ಭಾವನೆ ತೋರದೇ 'ಹೂಂ' ಅನ್ನುವಂತೆ ಗೋಣು ಅಲ್ಲಾಡಿಸಿದ ಪೊಲೀಸ. ಅಲ್ಲೇ ಎದುರಿಗಿದ್ದ ಕೂಲರಿನಿಂದ ಕುಡಿದು ನಂತರ ಬೊಗಸೆಯಲ್ಲಿ ತುಸು ನೀರು ತೆಗೆದುಕೊಂಡು ನೆತ್ತಿಯಮೇಲೆ ಹಾಕಿ ತಟ್ಟಿಕೊಂಡ. ಹಾಗೆಯೇ ಬಂದು ಬೆಂಚಿನ ಮೇಲೆ ಕುಳಿತ. ಕಾಲು ಸಣ್ಣಗೆ ನಡುಗಲು ಪ್ರಾರಂಭಿಸಿತು.

ಒಂದರ್ಧ ಗಂಟೆಯಾಗಿರಬಹುದು. ಸ್ಟೇಷನ್ನಿನ ಮುಖ್ಯ ದ್ವಾರದ ಕೋಣೆಯಲ್ಲಿ ಏನೋ ಸಣ್ಣ ಗಲಾಟೆ ಕೇಳಲಾರಂಭಿಸಿತು. ಏನೇನೋ ಮಾತುಗಳು, ನಡುವೆ ಒಂದು ಹೆಣ್ಣಿನ ಧ್ವನಿ. ಗಲಾಟೆ ಈಗ ತುಸು ದೊಡ್ಡದಾಗಿ ಸ್ಪಷ್ಟವಾಗಿ ಕೇಳಿಸತೊಡಗಿದಂತೆ ಚಂದ್ರಕಾಂತನ ಎದೆ ಧಸಕ್ ಅಂದಿತು, 'ಹೌದು, ಅದು ಚೇತನಾಳದ್ದೇ ಧ್ವನಿ'

ಇತ್ತ ಚಂದ್ರಕಾಂತನನ್ನು ಪೊಲೀಸರು ಹಿಡಿದುಕೊಂಡು ಹೋದದ್ದನ್ನು, ಯಾವುದೋ ಕೆಲಸಕ್ಕೆಂದು ಕಸಬಾಕ್ಕೆ ಬಂದಿದ್ದ ಆತನ ಸಹೋದ್ಯೋಗಿಯೊಬ್ಬ ದೂರದಿಂದ ನೋಡಿದ್ದ. ಏನೋ ಅವಘಡವಾಗಿದೆ ಎಂಬುದನ್ನರಿತು ನೇರವಾಗಿ ಚಂದ್ರಕಾಂತನ ಮನೆಗೆ ಹೋಗಿ ಚೇತನಾಳಿಗೆ ವಿಷಯ ತಿಳಿಸಿದ್ದ. ಉಟ್ಟ ಬಟ್ಟೆಯಲ್ಲಿಯೇ ಚೇತನಾ ಅದೇ ಸಹೋದ್ಯೋಗಿಯ ಕಾರಲ್ಲೇ ಪೊಲೀಸ್ ಸ್ಟೇಷನ್ನಿಗೆ ಬಂದಿದ್ದಳು. ಅಲ್ಲೇ ಮುಖ್ಯಸ್ಥನಂತೆ ಕಾಣುತ್ತಿರುವ ಪೊಲೀಸನಲ್ಲಿಗೆ ನೇರವಾಗಿ ಹೋಗಿ, "ನನ್ನ ಗಂಡನನ್ನು ಹಿಡಿದು ತಂದಿದ್ದೀರಂತೆ, ಆತ ಯಾವ ತಪ್ಪನ್ನೂ ಮಾಡಿರಲು ಸಾಧ್ಯವಿಲ್ಲ. ದಯವಿಟ್ಟು ಅವನನ್ನು ಬಿಟ್ಟುಬಿಡಿ" ಅಂದಳು. ಅಲ್ಲಿರುವವರೆಲ್ಲರೂ ಅಪರಿಚಿತ ಮಹಿಳೆಯೊಬ್ಬಳ ಈ ಅನಿರೀಕ್ಷಿತ ಪ್ರವೇಶದಿಂದ ಗೊಂದಲಕ್ಕೊಳಗಾದರು. ಏನು, ಎಂತ ಎಂದೆಲ್ಲಾ ಒಬ್ಬರಿಗೊಬ್ಬರು